# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : 352(413) |
| ಸದಸ್ಯರ ಹೆಸರು | : ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 19.02.2024. |
| ಉತ್ತರಿಸುವ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಪ್ರಾಥಮಿಕ ಶಾಲೆಗಳಿಗೆ 2002ರ ನಂತರ ಯಾವ ಯಾವ ವಿಷಯಗಳಿಗೆ ವಿಷಯವಾರು ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. | ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು–2001ರನ್ವಯ ಸಾಮಾನ್ಯ, ವಿಜ್ಞಾನ, ಇಂಗ್ಲೀಷ್ ಮತ್ತು ಹಿಂದಿ ವಿಷಯಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. |
| ಆ) | ಪ್ರಾಥಮಿಕ ಶಾಲಾ ಹಿಂದಿ ಸಹ ಶಿಕ್ಷಕರನ್ನು ಯಾವ ತರಗತಿಗಳಿಗೆ ಪಾಠ ಬೋಧನೆ ಮಾಡಲು ನೇಮಕಾತಿ ಮಾಡಿಕೊಳ್ಳಲಾಗಿದೆ. | 2015 ರ ಪೂರ್ವದಲ್ಲಿ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರನ್ನು 1 ರಿಂದ 7 ನೇ ತರಗತಿಗಳ ಬೋಧನೆಗಾಗಿ ನೇಮಕಾತಿ ಮಾಡಿಕೊಳ್ಳಲಾಗುತ್ತಿತ್ತು. ಹೀಗೆ ನೇಮಕಾತಿ ಮಾಡಿಕೊಂಡ ಶಿಕ್ಷಕರುಗಳು ನೇಮಕಾತಿ ಹೊಂದಿರುವ ವಿಷಯದ ಜೊತೆಗೆ ಇತರೆ ವಿಷಯಗಳನ್ನು ಬೋಧಿಸಬೇಕಾಗಿತ್ತು. |
| ಇ) | 2016ರ ಪೂರ್ವದಲ್ಲಿ 6 ರಿಂದ 7/8 ನೇ ತರಗತಿಗೆ ನೇಮಕವಾಗಿದ್ದ ಪ್ರಾಥಮಿಕ ಶಾಲಾ ಹಿಂದಿ ಸಹ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಹಿಂದಿ (1 ರಿಂದ 5ನೇ ತರಗತಿ) ಶಿಕ್ಷಕರೆಂದು ಪದನಾಮೀಕರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>2015 ರ ಪೂರ್ವದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು 1 ರಿಂದ 7 ನೇ ತರಗತಿಗಳ ಬೋಧನೆಗಾಗಿ ನೇಮಕಾತಿ ಮಾಡಿಕೊಳ್ಳಲಾಗುತ್ತಿತ್ತು. ಎನ್.ಸಿ.ಟಿ.ಇ ನಿಗಧಿಪಡಿಸಿದ ವಿದ್ಯಾರ್ಹತೆಯನುಸಾರ 2017ನೇ ಸಾಲಿನಲ್ಲಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8) ಎಂಬ ಹೊಸ ವೃಂದವನ್ನು ಸೃಜಿಸಲಾಗಿರುತ್ತದೆ. ಅದರಂತೆ 2015ರ ಪೂರ್ವದಲ್ಲಿ ನೇಮಕ ಹೊಂದಿದ ಶಿಕ್ಷಕರುಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರು (1–5) ಎಂದು ಪದನಾಮೀಕರಿಸಲಾಗಿರುತ್ತದೆ. |
| ಈ) | ಪ್ರಾಥಮಿಕ ಶಾಲೆ ಹಿಂದಿ (1 ರಿಂದ 5ನೇ ತರಗತಿ) ಶಿಕ್ಷಕರು ಯಾವ ತರಗತಿಗಳಿಗೆ ಪಾಠ ಬೋಧನೆ ಮಾಡಲು ಅವಕಾಶ ನೀಡಲಾಗಿದೆ: | ಹಿಂದಿ ವಿಷಯವು 6ನೇ ತರಗತಿಯಿಂದ ಪ್ರಾರಂಭವಾಗುವುದರಿಂದ, 2017ರ ಪೂರ್ವದಲ್ಲಿ ನೇಮಕಾತಿ ಹೊಂದಿದ್ದರೂ ಸಹ, ಸರ್ಕಾರದ ಆದೇಶ ಸಂಖ್ಯೆ: ಇಡಿ 626 ಪಿಬಿಎಸ್ 2017, ದಿನಾಂಕ 19.05.2017 ರಲ್ಲಿನ ಅವಕಾಶದನ್ವಯ, ಪ್ರಾಥಮಿಕ ಶಾಲಾ ಶಿಕ್ಷಕರನ್ನು (1 ರಿಂದ 5ನೇ ತರಗತಿ) 6 ರಿಂದ 8 ನೇ ತರಗತಿಗಳಿಗೆ ಬೋಧಿಸಲು ಸೂಚಿಸಲಾಗಿದೆ. |

| | | |
|---|---|---|
| ಉ) | ರಾಜ್ಯದಲ್ಲಿ ಮಂಜೂರಾಗಿರುವ ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕರ ಜಿಲ್ಲಾವಾರು ಹುದ್ದೆಗಳ ಮಾಹಿತಿ ನೀಡುವುದು. | ಅನುಬಂಧದಲ್ಲಿ ಒದಗಿಸಿದೆ. |
| ಊ) | ರಾಜ್ಯದಲ್ಲಿ ಮಂಜೂರಾಗಿರುವ ಪದವೀಧರ ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕರ ಜಿಲ್ಲಾವಾರು ಹುದ್ದೆಗಳ ಮಾಹಿತಿ ನೀಡುವುದು. | |
| ಋ) | ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಭಾಷಾ ಶಿಕ್ಷಕರೆಂದು ಪದನಾಮೀಕರಿಸಲು ಯಾವ ನಿಯಮಗಳನ್ವಯ ಸಾಧ್ಯವಾಗುವುದು? | ನಿಯಮಗಳಲ್ಲಿ ಅವಕಾಶವಿಲ್ಲ |

ಸಂಖ್ಯೆ: ಇಪಿ 12 ಪಿಎಂಎ 2024

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

District wise Hindi Posts Sanctioned

| Sl.No | District | PST Hindi | GPT Hindi | Total |
|---|---|---|---|---|
| 1 | BAGALKOTE | 357 | 31 | 388 |
| 2 | BALLARI | 237 | 51 | 288 |
| 3 | BELAGAVI | 387 | 32 | 419 |
| 4 | BENGALURU NORTH | 127 | 40 | 167 |
| 5 | BENGALURU RURAL | 29 | 6 | 35 |
| 6 | BENGALURU SOUTH | 187 | 46 | 233 |
| 7 | BIDAR | 103 | 7 | 110 |
| 8 | CHAMARAJANAGAR | 89 | 3 | 92 |
| 9 | CHIKKABALLAPURA | 21 | 9 | 30 |
| 10 | CHIKKAMANGALORE | 58 | 1 | 59 |
| 11 | CHIKKODI | 414 | 38 | 452 |
| 12 | CHITRADURGA | 107 | 7 | 114 |
| 13 | DAKSHINA KANNADA | 170 | 3 | 173 |
| 14 | DAVANAGERE | 131 | 3 | 134 |
| 15 | DHARWAD | 306 | 12 | 318 |
| 16 | GADAG | 201 | 1 | 202 |
| 17 | HASSAN | 37 | 3 | 40 |
| 18 | HAVERI | 341 | 3 | 344 |
| 19 | KALABURAGI | 366 | 46 | 412 |
| 20 | KODAGU | 13 | 0 | 13 |
| 21 | KOLAR | 24 | 10 | 34 |
| 22 | KOPPAL | 368 | 58 | 426 |
| 23 | MADHUGIRI | 24 | 0 | 24 |
| 24 | MANDYA | 33 | 2 | 35 |
| 25 | MYSURU | 139 | 13 | 152 |
| 26 | RAICHUR | 447 | 56 | 503 |
| 27 | RAMANAGARA | 29 | 4 | 33 |
| 28 | SHIVAMOGGA | 117 | 3 | 120 |
| 29 | SIRSI | 77 | 6 | 83 |
| 30 | TUMKUR | 35 | 6 | 41 |
| 31 | UDUPI | 78 | 3 | 81 |
| 32 | UTTARKANNADA | 35 | 1 | 36 |
| 33 | VIJAYANAGARA | 284 | 22 | 306 |
| 34 | VIJAYAPURA | 483 | 39 | 522 |
| 35 | YADAGIRI | 299 | 47 | 346 |
| **Total** | | **6153** | **612** | **6765** |